ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ 01 ಇಎಪಿ 2024

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು
ದಿನಾಂಕ: 07.08.2024

**ಸುತ್ತೋಲೆ**

ವಿಷಯ: ಬ್ಲೂ ಬುಕ್‌ಗಳ ವಿಲೇವಾರಿ ಮತ್ತು ಆಂತರಿಕ ಅಂಕಗಳ ರಿಜಿಸ್ಟರ್‌ಗಳನ್ನು ಸಂರಕ್ಷಿಸುವ ಕುರಿತು.
ಉಲ್ಲೇಖ: ತಾಂತ್ರಿಕ ಪರೀಕ್ಷಾ ಮಂಡಳಿಯ ದಿನಾಂಕ: 04.02.2013 ರಂದು ನಡೆದ 153 ನೇ ಕೇಂದ್ರೀಯ ಸಭೆಯ ನಿರ್ಣಯ 153.2.11.

*-*-*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ತಾಂತ್ರಿಕ ಪರೀಕ್ಷಾ ಮಂಡಳಿಯ 153ನೇ ಕೇಂದ್ರ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಿಸಿರುವಂತೆ ಸರ್ಕಾರಿ/ಖಾಸಗಿ ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಆಂತರಿಕ ಪರೀಕ್ಷೆಗಳ ಹಾಗೂ ಇತರೆ ಚಟುವಟಿಕೆಗಳಿಗೆ ಸಂಬಂಧಿಸಿದ ಮೌಲ್ಯಮಾಪನವಾದ ಬ್ಲೂ ಬುಕ್‌ಗಳನ್ನು ಮೂರು ವರ್ಷಗಳ ಕಾಲ ಸಂರಕ್ಷಿಸಿಟ್ಟು ನಂತರ ನಿಯಮಾನುಸಾರ ವಿಲೇ ಮಾಡಲು ಮತ್ತು ಆಂತರಿಕ ಅಂಕಗಳ ವಹಿಯನ್ನು ಖಾಯಂ ದಾಖಲೆಯಾಗಿ ಸಂರಕ್ಷಿಸಿಡಲು ತಿಳಿಸಲಾಗಿತ್ತು.

ಆದ್ದರಿಂದ ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಂಶುಪಾಲರು ಸಂಸ್ಥೆಯ ವಿವಿಧ ಕೋರ್ಸುಗಳಿಗೆ NBA ವತಿಯಿಂದ ಮಾನ್ಯತೆ ಪಡೆಯಲು ಅವಶ್ಯವಿರುವ ವಿದ್ಯಾರ್ಥಿಗಳ ಬ್ಲೂ ಬುಕ್‌ಗಳನ್ನು ಸಂರಕ್ಷಿಸಿಡಲು ಕ್ರಮ ವಹಿಸುವುದು. ಉಳಿದ ವಿದ್ಯಾರ್ಥಿಗಳ ಬ್ಲೂ ಬುಕ್‌ಗಳನ್ನು ಪರೀಕ್ಷಾ ಫಲಿತಾಂಶಗಳಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಆಕ್ಷೇಪಣೆಗಳು ಇಲ್ಲದೇ ಇರುವುದನ್ನು ಖಚಿತಪಡಿಸಿಕೊಳ್ಳುವ ನಿಬಂಧನೆಗೊಳಪಟ್ಟು ವಿಲೇವಾರಿ ಮಾಡಲು ಕ್ರಮ ಕೈಗೊಳ್ಳುವುದು, ಹಾಗೂ ಆಂತರಿಕ ಅಂಕಗಳ ರಿಜಿಸ್ಟರ್‌ಗಳನ್ನು ಖಾಯಂ ದಾಖಲೆಯಾಗಿ ಸಂರಕ್ಷಿಸಿಡಲು ತಿಳಿಸಲಾಗಿದೆ.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ.

ಇವರಿಗೆ:

ರಾಜ್ಯದ ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ – ಮಾಹಿತಿಗಾಗಿ.

ಪ್ರತಿ:

1. ಆಯುಕ್ತರ ಆಪ್ತಶಾಖೆ – ಅವಗಾಹನೆಗಾಗಿ.
2. ನಿರ್ದೇಶಕರ ಆಪ್ತಶಾಖೆ – ಅವಗಾಹನೆಗಾಗಿ.
3. ಇ-ಆಡಳಿತ ವಿಭಾಗ (ವೆಬ್‌ಸೈಟ್‌ನಲ್ಲಿ ಪ್ರಕಟಿಸಲು).
4. ಇಸಿಎಸ್/ಇಎಫ್‌ಎಸ್/ಇಆರ್‌ಎಸ್, ಮುಂದಿನ ಕ್ರಮಕ್ಕಾಗಿ.
5. ರಿಜಿಸ್ಟ್ರಾರ್ (ಪರೀಕ್ಷೆ).
6. ಉಪ ನಿರ್ದೇಶಕರು (ಪರೀಕ್ಷೆ).
7. ಕಾರ್ಯದರ್ಶಿಯವರ ಆಪ್ತಶಾಖೆ.
8. ಗಣಕ ಕೇಂದ್ರ ವಿಭಾಗ – ಬಿಟಿಇ ಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು.
9. ಕಛೇರಿ ಪ್ರತಿ.